

ನೋಡುತ್ತಾ ಅವುಗಳಿಗೆ ಮನಸ್ಸಿಗೆ ಬಂದಂತಹ ಹೆಸರುಗಳನ್ನು ಕೊಡುತ್ತಾ ಇರುತ್ತಿದ್ದೆ.

ಹೀಗೆ ಕುಳಿತು ಬಂಟಮಲೆಯನ್ನು ನಿರುಕಿಸುತ್ತಿದ್ದ ಹೊತ್ತಿನಲ್ಲಿ ಗಮನಕ್ಕೆ ಬಂತು ಸುತ್ತಮುತ್ತಲಿನ ಸ್ತಬ್ಧತೆ! ಸುತ್ತಲೂ ಯಾವುದೇ ಚಲನೆಯೇ ಇಲ್ಲದಂತಿತ್ತು. ಅರೆ, ಇಷ್ಟೊಂದು ನಿಶ್ಶಬ್ದ! ಅಂಗಳದ ಅಂಚಿನಲ್ಲಿ ನೆಟ್ಟಿದ್ದ ಗಿಡಗಳ ಕಡೆಗೆ ಕಣ್ಣು ಹೋಯಿತು, ಮತ್ತೆ ಅಂಗಳದ ತುದಿಯಿಂದಲೇ ಆರಂಭವಾದ ತೋಟದಲ್ಲಿ ಉದ್ದಕೂ ಕಾಣುವ ಅಡಿಕೆ ಮರಗಳು... ಒಂದೇ ಒಂದು ಎಲೆಯೂ ಅಲುಗಾಡುತ್ತಿಲ್ಲವಲ್ಲ. ಹೋ! ನಿಶ್ಚಲತೆ ಅಂದರೆ ಇದೆಯೇ! ಒಮ್ಮೆಲೇ ಮನಸ್ಸು ಜಾಗೃತವಾಯಿತು... ಏನಾದ್ರೂ ಸದ್ದು ಕಿವಿಗೆ ಬೀಳಬಹುದೇ! ಚಾವಡಿಯ ಬದಿಗೆ ನೆಟ್ಟ ಗಿಡದ ಕೆಂಪು ಹೂಗಳಿಗೆ ಮುತ್ತಿಕ್ಕಿ ಹೋಗುವಂತೆ ಲಘುವಾಗಿ ಹೂವಿನೊಳಕ್ಕೆ ಮುಳ್ಳಿನಷ್ಟೇ ಹರಿತವಿರುವ ತನ್ನ ಚೂಪಾದ ಕೊಕ್ಕನ್ನು ತೂರಿಸಿ ಜೇನು ಹೀರಿ, ಗಾಳಿಯಲ್ಲಿ ಬರ್‍ರೆಂದು ಹೋವರ್ ಮಾಡುವ ಸರ್ದಕ್ಕಿ ಎಲ್ಲಿ ಹೋಯಿತು! ಮರಕ್ಕೆ ಮೊಳೆ ಹೊಡೆದಂತೇ ಕಟಕಟ ಹೊಡೆಯುವ ಹಳದಿ ಕೆಂಪಿನ ಮರಕುಟಿಗನೆಲ್ಲಿದೆ? ನನ್ನ ಪಾಡು ನೋಡಿ ಗೇಲಿ ಮಾಡುವಂತೆ ಪಕಪಕನೆ ನಗುವ ಮಂಗಟ್ಟೆಯೆಲ್ಲಿದೆ! ಗಸೆಗಸೆ ಮರದ ತುಂಬ ಹಾರುತ್ತಾ ಹಣ್ಣಿನ ಚೂರನ್ನೂ ಉಳಿಸದೇ ಹೋಗುವ ಹಕ್ಕಿಗಳ ದಂಡು ಎಲ್ಲಿ ಹೋಯಿತು! ಕಳೆದ ಸಾರಿ ಬಂದಿದ್ದಾಗ ಹೀಗೆ ನಾನೊಬ್ಬಳೇ ಕೂತಿದ್ದಾಗ ಗಳಿಗೆಗೊಮ್ಮೆ ಸೂರಿನ ಹಂಚಿನ ಮೇಲೆ ಟಪ್ ಟಪ್ ಎಂದು ಯಾರೋ ಕಲ್ಲು ಬಿಸಾಡಿದ ಸದ್ದಾಗುತ್ತಿತ್ತು. ಏನಪ್ಪಾ! ಯಾರಾದರೂ